ಮಯೂರ
ಮಾರ್ಚ್ 2016 ಬೆಲೆ : ₹ 15



# ನವಿಲುಗನ್ನಡಿ

▶▶ ಸುನಂದಾ ಕಡಮೆ ಅವರ ಕತೆ'ಸರಸ್ವತಿಯ ಫೇಸ್‌ಬುಕ್ ಪ್ರಸಂಗ' ಉತ್ತರ ಕರ್ನಾಟಕ ಕನ್ನಡದ ಸೊಗಡಿನೊಂದಿಗೆ, ಹಳೇ ಮೈಸೂರು ಕನ್ನಡದ ಸೊಬಗಿನೊಂದಿಗೆ ಚೆನ್ನಾಗಿ ಮೂಡಿಬಂದಿದೆ. ಫೇಸ್‌ಬುಕ್‌ನ ಕೆಲವು ಕೆಟ್ಟ ಪರಿಣಾಮದೊಂದಿಗೆ, ಜೀವನವನ್ನೆಲ್ಲಾ ಬರೇ ಮನೆಯೊಳಗಿರದೆ ಹೊರಗಿನ ಪ್ರಪಂಚದ ವಿಚಾರ ತೋರಿಸಿರುವ ಜಾಣ್ಮೆ ಚೆನ್ನಾಗಿದೆ. ಈಗಿನ ನವದಂಪತಿಗೆ, ಹಳಬರಿಗೆ, ಸಂಸಾರ ಬರೀ ಜಂಜಾಟ ಎನ್ನುವವರಿಗೆ ಸರಸ್ವತಿ, ಶಂಕರರ ದಾಂಪತ್ಯದ ಸಂತಸದ ಹೊನಲನ್ನು ಲೇಖಕಿ ಹರಿಸಿದ್ದಾರೆ. ಇದನ್ನು ಮುಗುಳು ನಗೆಯೊಂದಿಗೆ ಮುಕ್ತಾಯ ಮಾಡಿದ್ದಾರೆ. ಇಂತಹ ಕತೆಗಳು 'ಮಯೂರ'ದಲ್ಲಿ ಬರಲಿ.

**ಸುನಂದಾ ಶಂಕರ್ ರಾವ್,** ಬೆಂಗಳೂರು

---

▶▶ ಎನ್. ಶೈಲಜಾ ಅವರ 'ಕರಿ ಮೋಡ್ದಾಗೊಂದು ಬೆಳ್ಳಿಂಚು' ಕತೆ ತುಂಬಾ ಹಿಡಿಸಿತು. ಪರಿಸ್ಥಿತಿ ಎಂತಹವರನ್ನಾದರು ಮಣಿಸುತ್ತದೆ ಎನ್ನುವುದಕ್ಕೆ ಇದು ಉದಾಹರಣೆ. ಶಾಂತಿ ಕೆ.ಎ. ಅವರ ಕತೆ 'ದಾರಿ' ಮನಮುಟ್ಟುವಂತಿತ್ತು. ಅದರಲ್ಲಿ ವನಜಳ ಸ್ಥಿತಪ್ರಜ್ಞತೆ ತುಂಬಾ ಹಿಡಿಸಿತು. ಎಲ್ಲಕ್ಕಿಂತ ಹೆಚ್ಚಾಗಿ ಕತೆಗಳ ಕೊನೆಯಲ್ಲಿ ಸಾಹಿತಿಗಳ ಪರಿಚಯ ಸಮಯೋಚಿತ.

**ನೀಲಮ್ಮ ಕುಮಾರಪ್ಪ,** ಲಿಂಗಸೂರು

---

▶▶ ಬಾನು ಮುಷ್ತಾಕ್ ಅವರ 'ಮನೆಯಂಗಳದಲ್ಲಿ ರಕ್ತ' ಇಂದಿನ ಪರಿಸ್ಥಿತಿಯನ್ನು ಯಥಾರೀತಿ ಚಿತ್ರಿಸಿದೆ. ಒಂದು ಕಾಲದಲ್ಲಿ ರೇಡಿಯೋದಲ್ಲಿ ಪ್ರಸಾರವಾಗುತ್ತಿದ್ದ ಸಂಗೀತ ಕಾರ್ಯಕ್ರಮ ಕೇಳಿದಾಗ, ಎಲ್ಲ ಕಲಾವಿದರೂ ಆ ಚಿಕ್ಕ ಪೆಟ್ಟಿಗೆಯಲ್ಲೇ ಸೂಕ್ಷ್ಮದೇಹಿಗಳಾಗಿ ಅಡಗಿರುತ್ತಾರೆ ಎಂದೇ ನಂಬಿದ್ದೆವು. ಹಾಗೇ ಇಂದು ಟೀವಿಯಲ್ಲಿ ಬಿತ್ತರಿಸಲಾಗುವ ಕ್ರೂರ ಕೃತ್ಯವೆಸಗುವವರು ಅದರಲ್ಲೇ ಅಡಗಿದ್ದಾರೆ. ಅವರನ್ನು ಸರಿದಾರಿಗೆ ತರಬೇಕು ಎಂದು ಹರಸಾಹಸ ಮಾಡಿದ ರೆಹಮತ್‌ಳ ಅಮಾಯಕತನ ಬಹಳ ಚೆನ್ನಾಗಿ ಬಂದಿದೆ.

**ಶ್ರೀನಾಥ್ ಕೊನೇಟಿ**, ಬೆಂಗಳೂರು

---

▶▶ ಅಬಾಲ ವೃದ್ಧರಾದಿಯಾಗಿ ಪ್ರತಿಯೊಬ್ಬರನ್ನೂ ಅಯಸ್ಕಾಂತದಂತೆ ಸೆಳೆಯುತ್ತಿರುವ 'ಮಯೂರ' ತನ್ನ ಪ್ರತಿಯೊಂದು ಪುಟದಲ್ಲೂ ವಿಭಿನ್ನ ರೀತಿಯ ಸುಲಲಿತವಾದ ಸಾಹಿತ್ಯ ಭಂಡಾರವನ್ನು ತುಂಬಿಕೊಂಡು ಕಂಗೊಳಿಸುತ್ತಿರುವುದು ತುಂಬಾ ಖುಷಿ ನೀಡುತ್ತಿದೆ.

'ನವಿಲುಗರಿ' ಅಂಕಣದಲ್ಲಿ ಪ್ರಕಟವಾದ ನೀಳಾದೇವಿಯವರ 'ಹೊಸಿಲು– ಹೊಣೆ' ಆ ಕಾಲಘಟ್ಟದ ಕತೆಗಳು ಅದೆಷ್ಟು ಮೌಲ್ಯಾಧಾರಿತವಾಗಿರುತ್ತವೆ ಎಂಬುದಕ್ಕೆ ಸಾಕ್ಷಿಯಾಗಿದೆ.

**ಎಂ.ಕೆ. ಮಂಜುನಾಥ್, ಬೆಂಗಳೂರು**

---

▶▶ ಈ ಸಂಚಿಕೆ ವೈವಿಧ್ಯಮಯ ಬರಹಗಳಿಂದ, ಕತೆಗಳಿಂದ ತುಂಬಿದ್ದು, ಓದುಗರಿಗೆ ಇಷ್ಟವಾಗುತ್ತದೆ. 'ಸರಸ್ವತಿಯ ಫೇಸ್ ಬುಕ್ ಪ್ರಸಂಗ' ಕತೆ ಕುತೂಹಲ ಕಾರಿಯಾಗಿ ಓದಿಸಿಕೊಂಡು ಹೋಗುತ್ತದೆ.

**ಬಾ.ರಂ. ಸುರೇಶ್,** ಶಿವಮೊಗ್ಗ